ದಿನಾಂಕಃ 06-12-2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ- ವಾದಿ ಪರ ಶ್ರೀ ಎಸಎಕೆ ವಕೀಲರಿಂದ

ನನ್ನ ಸಾಕ್ಷಿಮುಖ್ಯ ವಿಚಾರಣೆ ಪ್ರಮಾಣಪತ್ರದ ಖಂಡಿಕೆ 11 ರಲ್ಲಿ ಕುಟುಂಬದ ಮೂಲ ಪುರುಷನಾದ ಹೊನ್ನಪ್ಪ ಡಂಬರಮತ್ತೂರ ಇತನಿಗೆ ದೊಡ್ಡಬಸಪ್ಪ, ಗೂಳಪ್ಪ ಹಾಗೂ ಸಣ್ಣಬಸಪ್ಪ ತಂದೆ ಹೊನ್ನಪ್ಪ ಡಂಬರಮತ್ತೂರ ಅಂತಾ ನಾನು ಬರೆಸಿ ಹಾಕಿರುವುದಿಲ್ಲ. ಹೊನ್ನಪ್ಪನಿಗೆ 3 ಮಕ್ಕಳು ಇದ್ದರೂ ಸಹಿತ ಕೇವಲ ಇಬ್ಬರು ಮಕ್ಕಳು ಇರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ನನ್ನ ಲಿಖಿತಪತ್ರದಲ್ಲಿ ಹೊನ್ನಪ್ಪನ ವಂಶಾವಳಿ ಕಾಣಿಸಿರುವುದಿಲ್ಲ ಅಂದರೆ ಸರಿಯಲ್ಲ. ಹೊನ್ನಪ್ಪನಿಗೆ 4 ಎಕರೆಯ ಜಮೀನು ಇತ್ತು. ಹೊನ್ನಪ್ಪ ಮೃತಪಟ್ಟ ನಂತರ ಈ ಜಮೀನು ಆತನ 3 ಮಕ್ಕಳಿಗೆ ಬಂಂದಿರುವದು ಅಂದರೆ ಸರಿಯಲ್ಲ. ಗೂಳಪ್ಪ ಮತ್ತು ದೊಡ್ಡಬಸಪ್ಪನಿಗೆ ಮಾತ್ರ ಬಂದಿರುವುದು. ದೊಡ್ಡಬಸಪ್ಪನಿಗೆ ಇಬ್ಬರು ಗಂಡು ಮಕ್ಕಳಿರುವರು. ಎಷ್ಟು ಹೆಣ್ಣು ಮಕ್ಕಳು ಇರುವರು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆತನಿಗೆ ಹೆಣ್ಣು ಮಕ್ಕಳಿರುವರು ನನಗೆ ಗೊತ್ತಿರುವುದಿಲ್ಲ. ಈ ಇಬ್ಬರು ಗಂಡು ಮಕ್ಕಳಿಗೆ ಮತ್ತು ಆ ಹೆಣ್ಣು ಮಕ್ಕಳಿಗೆ ಎಷ್ಟು ಮಕ್ಕಳು ಎಂಬುದರ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ಗೂಳಪ್ಪನಿಗೆ 7 ಜನ ಗಂಡು ಮಕ್ಕಳು. 4 ಜನ ಗಂಡು ಮಕ್ಕಳು ಇರುವರು. ಅವರೆಂದರೆ ಪಕ್ಕೀರಪ್ಪ. ಇತನಿಗೆ 4 ಜನ ಗಂಡು ಮಕ್ಕಳು. ಇಬ್ಬರು ಹೆಣ್ಣು ಮಕ್ಕಳು. 2 ನೇ ಮಗ ಮಲ್ಲಪ್ಪ. ಇತನಿಗೆ ಒಬ್ಬ ಗಂಡು ಮಗ ಹಾಗೂ 4 ಜನ ಹೆಣ್ಣು ಮಕ್ಕಳು ಇರುವರು. ಅವರೆಂದರೆ ಮಲ್ಲವ್ವ, ನೀಲವ್ವ, ಗಂಗವ್ವ, ತಿರುಕವ್ವ. ಮಲ್ಲವ್ವಳ ಗಂಡನ ಹೆಸರು ಯಲ್ಲಪ್ಪ. ಇವರು ಈಗ ಮೃತಪಟ್ಟಿರುವರು. ತಿರುಕವ್ವಳ ಗಂಡನ ಹೆಸರು ಅಡಿವೆಪ್ಪ ಅಡ್ಡೆನ್ನವರ. ಇವರು ಬಸರಿಕಟ್ಟಿ ಗ್ರಾಮದಲ್ಲಿ ವಾಸವಾಗಿರುವರು. ತಿರುಕವ್ವ ಮೃತಪಟ್ಟಿರುವಳು. ಇವಳಿಗೆ ಮಕ್ಕಳು ಇರುವರು. ಗೂಳಪ್ಪನ 3 ನೇ ಮಗನ ಹೆಸರು ಮಾರ್ತಾಂಡಪ್ಪ. ಇತನಿಗೆ 4 ಜನ ಗಂಡು ಮಕ್ಕಳು. ಒಬ್ಬಳು ಹೆಣ್ಣು ಮಗಳು ಇರುವಳು. ಅವರೆಂದರೆ ಗೂಳಪ್ಪ, ಹನುಮಂತಪ್ಪ, ಪುಟ್ಟಪ್ಪ, ಬಸಪ್ಪ ಹಾಗೂ

ಹೊನ್ನವ್ವ ಅಂದರೆ ಸರಿ. ಗೂಳಪ್ಪನ 4 ನೇ ಮಗನ ಹೆಸರು ದೊಡ್ಡಹನುಮಂತಪ್ಪ. ಇತನಿಗೆ 4 ಜನ ಗಂಡು ಮಕ್ಕಳು ಇರುವರು. ಅವರೆಂದರೆ ಗಂಗಪ್ಪ, ಕೋಟೆಪ್ಪ, ಹೊನ್ನಪ್ಪ ಮತ್ತು ಪರಸಪ್ಪ ಅಂದರೆ ಸರಿ. ಪರಸಪ್ಪ ಮೃತಪಟ್ಟಿರುವನು. ಇತನ ಹೆಂಡತಿಯ ಹೆಸರು ನಿಂಗವ್ವ. ಇವರ ಮಗಳ ಹೆಸರು ದ್ಯಾಮವ್ವ ಅಂದರೆ ಸರಿ. ಗೂಳಪ್ಪನ 5 ನೇ ಮಗನ ಹೆಸರು ಸಣ್ಣಹನುಮಂತಪ್ಪ ಅಂದರೆ ಸರಿ. ಇತನಿಗೆ 4 ಜನ ಗಂಡು ಮಕ್ಕಳು ಅಂದರೆ ಸರಿ ಹಾಗೂ ಒಬ್ಬ ಹೆಣ್ಣು ಮಗಳು ಅಂದರೆ ಸರಿಯಲ್ಲ. ಒಬ್ಬಳು ಹೆಣ್ಣು ಮಗಳು ಇರುವರು. ಅವರೆಂದರೆ ಚೆನ್ನಪ್ಪ, ಹೊನ್ನಪ್ಪ, ಅರ್ಜುನಪ್ಪ ಮತ್ತು ಚನ್ನಪ್ಪ ಹಾಗೂ ಇಬ್ಬರುಹೆಣ್ಣು ಮಕ್ಕಳು. ಬಸವಣ್ಣೆವ್ವ ಮತ್ತು ಬಸಕ್ಕ. ಚನ್ನಪ್ಪ ವಿವಾಹವಾಗದೇ ಮೃತಪಟ್ಟಿರುವನು. ಹೊನ್ನಪ್ಪನಿಗೆ ಅನಸವ್ವ ಎಂಬ ಹೆಂಡತಿ. ಸಣ್ಣಹನುಮಂತಪ್ಪ ಮತ್ತು ನಿಂಗಪ್ಪ ಎಂಬ ಮಕ್ಕಳು ಅಂದರೆ ಸರಿ. ಗೂಳಪ್ಪನ 5 ನೇ ಮಗನಾದ ಬಸಪ್ಪ ಇತನಿಗೆ 5 ಜನ ಗಂಡು ಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳು ಇರುವರು. ಅವರೆಂದರೆ ಬೀಮಪ್ಪ, ಶಿವಪ್ಪ, ಮಲ್ಲಪ್ಪ, ಸೋಮಣ್ಣ, ಹನುಮಂತಪ್ಪ. ಪಕ್ಕೀರವ್ವ, ಶಾಂತವ್ವ, ಸಾವಂತ್ರವ್ವ ಇರುವರು ಬಸಪ್ಪನಿಗೆ ಗುಡದಪ್ಪ ಎಂಬ ಮಗನು ಇರುವನು ಅಂದರೆ ಸಾಕ್ಷಿ ಉತ್ತರಿಸುವುದೆನೆಂದರೆ ಆತ ಗುಡ್ಡಪ್ಪ ಇರುವುದಾಗಿ ಎಂದು ಉತ್ತರಿಸುವರು ಶಿವಪ್ಪ ಮೃತಪಟ್ಟಿರುವನು ಅಂದರೆ ಸರಿ. ಇತನ ಹೆಂಡತಿ ತಂಗೆವ್ವ ಮತ್ತು ಮಗ ಮಂಜುನಾಥ ಅಂತಾ ಇರುವರು ಅಂದರೆ ಸರಿ. ಗುಡದಪ್ಪನ 7 ನೇ ಮಗನ ಹೆಸರು ಸಣ್ಣನಿಂಗಪ್ಪ ಅಂದರೆ ಸರಿ. ಇತ ಈಗ ಮೃತಪಟ್ಟಿರುವನು. ಇತನಿಗೆ ಎರಡುಜನ ಗಂಡುಮಕ್ಕಳು. ಅವರೆಂದರೆ ಚಿಕ್ಕಪ್ಪ ಮತ್ತು ಗೂಳಪ್ಪ ಅಂದರೆ ಸರಿ.4 ಜನ ಹೆಣ್ಣು ಮಕ್ಕಳುಇರುವರು. ಅವರೆಂದರೆ ಅಕ್ಕಮ್ಮ, ಶಾಂತವ್ವ , ನಿಂಗವ್ವ ಮತ್ತು ಮಂಜವ್ವ ಅಂದರೆ ಸರಿ. ಶಾಂತವ್ವ ಮೃತಪಟ್ಟಿದ್ದು ಅವಳ ಗಂಡ ಬಸಪ್ಪ ಮತ್ತು ಮಗ ಹೊನ್ನಪ್ಪ ಅಂದರೆ ಸರಿ.

ನಮ್ಮ ಕುಟಂಬದ ಸದಸ್ಯರು ಮೇಲೆ ಹೇಳಿದವರನ್ನು ಹೊರತುಪಡಿಸಿ ಬೇರೆ ಯಾರೂ ಇರುವುದಿಲ್ಲ ಅಂದರೆ ಸರಿ. ಈ ಮೇಲೆ ಹೇಳಿದ ಎಲ್ಲ ಕುಟುಂಬ ಸದಸ್ಯರು

ಒಕ್ಕಲುತನವನ್ನು ಹೊರತುಪಡಿಸಿ ಬೇರೆ ಉದ್ಯೋಗ ಮಾಡುವುದಿಲ್ಲ ಅಂದರೆ ಸರಿ. ದಾವಾ ಆಸ್ತಿಗಳೆಲ್ಲವೂ ಕುಟಂಬದ ಮೂಲ ಪುರುಷನಾದ ಗೂಳಪ್ಪನ ಆಸ್ತಿಯಿಂದ ಬಂದ ಉತ್ಪನ್ನದಿಂದ ಖರೀದಿ ಮಾಡಿರತಕ್ಕಂತಹ ಆಸ್ತಿಗಳು ಅಂದರೆ ಸರಿಯಲ್ಲ. ಹಿರಿಯರಿಂದ ಕೇವಲ 2 ಎಕರೆ ಜಮೀನು ಬಂದಿರುವುದು. ಗೂಳಪ್ಪನ ಮಕ್ಕಳು ಕೂಲಿನಾಲಿ ಮಾಡಿ ತಮ್ಮ ಸ್ವತಂತ್ರ ವಾದ ಆದಾಯ ಹೊಂದಿದ್ದರು. ಈ ಕೂಲಿನಾಲಿ ಮಾಡಿದ ಬಗ್ಗೆ ಲೆಕ್ಕ ಪತ್ರ ಇಟ್ಟಿರುವುದಿಲ್ಲ.

ಶೆಡ್ಯೂಲ ಎ ದ ಆಸ್ತಿಗಳಲ್ಲಿ ತೋರಿಸಿರತಕ್ಕಂತಹ ಹೊನ್ನಪ್ಪನ ಮಕ್ಕಳು ಕೂಡಿಯೇ ವಾಸವಾಗಿದ್ದರು ಅಂದರೆ ಸರಿಯಲ್ಲ. ಅವರು ಬೇರೆ ಬೇರೆಯಾಗಿ ವಾಸವಾಗಿದ್ದರು. ಇವರು ಪತ್ಯೇಕವಾಗಿ ವಾಸವಾಗಿದ್ದ ಬಗ್ಗೆ ಹಾಗೂ ಹಿಸ್ಸೆದಿಸ್ಸೆ ಮಾಡಿಕೊಂಡ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ಇವತ್ತಿನವರೆಗೂ ಅವರು ಕೂಡಿಯೇ ವಾಸವಾಗಿರುವರು ಅಂದರೆ ಸರಿಯಲ್ಲ. ಆ ಪಾಲು ವಾಟ್ನಿ ಮಾಡಿಕೊಡಂ ಸಮಯದಲ್ಲಿ ಯಾವ ಯಾವ ಜಮೀನು ಬಂದಿರುವುದು ಎಂಬುದರ ಬಗ್ಗೆ ನನಗೆ ಗೊತ್ತಿರುವುದು. ರಿ ಸ ನಂ. 18 ವಿಸ್ತೀರ್ಣ 2 ಎಕರೆ ಜಮೀನು ಬಸಪ್ಪ ಮತ್ತು ಗೂಳಪ್ಪ ಜಂಟಿಯಾಗಿ ಹೊಂದಿದ್ದರು. ರಿ ಸ ನಂ. 17 ವಿಸ್ತೀರ್ಣ 19 ಗುಂಟೆ ಜಮೀನು ಸಹ ಬಸಪ್ಪ ಮತ್ತು ಗೂಳಪ್ಪ ಜಂಟಿಯಾಗಿ ಹೊಂದಿದ್ದರು. ರಿ ಸ ನಂ. 110 ವಿಸ್ತೀರ್ಣ 1 ಎಕರೆ ಜಮೀನು ಸಹ ಜಂಟಿಯಾಗಿ ಹೊಂದಿರುವರು. ರಿ ಸ ನಂ. 5 ವಿಸ್ತೀರ್ಣ 28 ಗುಂಟೆ ಜಮೀನನ್ನು ಜಂಟಿಯಾಗಿ ಹೊಂದಿರುವರು. ಈ ಮೇಲೆ ಹೇಳಿದ ಆಸ್ತಿಗಳು ಮೂಲಪುರುಷನಾದ ಹೊನ್ನಪ್ಪನ ಆಸ್ತಿಗಳು ಆಗಿರುವವು. ಈ ಮೇಲೆ ಹೇಳಿದ ಜಮೀನಿನ ಒಟ್ಟು ಕ್ಷೇತ್ರ 12 ಎಕರೆಗಿಂತಲೂ ಹೆಚ್ಚಿಗೆ ಆಗುವುದು. ಈ ಮೇಲೆ ಹೇಳಿದ ಜಮೀನುಗಳನ್ನು ಗೂಳಪ್ಪನ ಮಕ್ಕಳು ಖರೀದಿ ಹಿಡಿದಿರುವರು. ಹೊನ್ನಪ್ಪನ ಜಮಿನಿಂದ ಬಂದ ಆದಾಯದಿಂದಲೇ ಈ ಜಮಿನುಗಳನ್ನು ಖರೀದಿ ಮಾಡಿರುವರು ಅಂದರೆ ಸರಿಯಲ್ಲ. ಈ ಜಮೀನುಗಳಿಂದ ಎಷ್ಟು ಆದಾಯ

ಬರುತ್ತಿತ್ತು ಎಂಬುದರ ಬಗ್ಗೆ ಯಾವದೇ ಲೆಕ್ಕ ಪತ್ರ ಇಟ್ಟಿರುವುದಿಲ್ಲ ಅಂದರೆ ಸರಿ ದಾವಾ ಆಸ್ತಿಗಳೆಲ್ಲವೂ ಕುಟುಂಬದ ಮೂಲಪುರುಷನ ಜಮೀನಿಂದಲೇ ಬಂದಆದಾಯದಿಂದ ಖರೀದಿಸಿರುವಂತಹ ಆಸ್ತಿಗಳುಆಗಿರುವವು ಅಂದರೆ ಸರಿಯಲ್ಲ. ಹೊನ್ನಪ್ಪನ ಮಕ್ಕಳ ಮಧ್ಯೆ ಯಾವ ದಿನಾಂಕದಂದು ಹಿಸ್ಸೆ ದಿಸ್ಸೆ ಆಗಿರುವುದು ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಹಿಸ್ಸೆ ದಿಸ್ಸೆ ಆದ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ ಅಂದರೆ ಸರಿ.

ನಮ್ಮ ಕುಟುಂಬದ ಹೆಸರಿನಲ್ಲಿ ಕೆಎ 27-8457 ರ ಟ್ರ್ಯಾಕ್ಟರ ಇರುವುದು ಅಂದರೆ ಸರಿಯಲ್ಲ. ನಮ್ಮ ಕುಟುಂಬದ ಹೆಸರಿನಲ್ಲಿ ಯಾವುದೇ ಟ್ರ್ಯಾಕ್ಟರ ಮತ್ತು ಮೋಟಾರಸೈಕಲ್ ಇರುವುದಿಲ್ಲ. ನಮ್ಮ ಕುಟುಂಬದ ಹೆಸರಿನಲ್ಲಿ ಯಾವುದೇ ವಾಹನಗಳು ಇರುವುದಿಲ್ಲ. ನಮ್ಮ ಕುಟುಂಬದ ಹೆಸರಿನಲ್ಲಿ ಈಗ ಒಂದು ಟ್ರ್ಯಾಕ್ಟರ ಹಾಗೂ ಎರಡು ಮೋಟಾರು ಸೈಕಲಗಳು ಇರುವವು. ವಾದಿಯರ ಹೆಸರಿನಲ್ಲಿ ಎರಡು ದ್ವಿಚಕ್ರ ವಾಹನಗಳು ಇರುವವು ಅವುಗಳ ನೊಂದಣಿ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ವಾದಿಯರ ಹೆಸರಿನಲ್ಲಿ ಯಾವುದೇ ದ್ವಿಚಕ್ರ ವಾಹನಗಳು ಇರದೇ ಇದ್ದರೂ ಸಹಿತ ನಾನು ಇರುವುದಾಗಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ.

ರಿ ಸ ನಂ. 18/6 ಮತ್ತು 18/7 ಜಮೀನುಗಳನ್ನು ನಿಂಗಪ್ಪನ ಕುಟುಂಬ ಸದಸ್ಯರು ಖರೀದಿ ಮಾಡಿರುವರು. ಈ ಎರಡೂ ಜಮೀನುಗಳನ್ನು ಸಹ ಪೂರ್ವಜರ ಜಮೀನಿಂದ ಬಂದ ಆದಾಯದಿಂದ ಖರೀದಿ ಮಾಡಿರುವರು ಅಂದರೆ ಸರಿಯಲ್ಲ. ದಾವಾ ಆಸ್ತಿಗಳೆಲ್ಲವೂ ಹಿರಿಯರ ಜಮೀನಿನಿಂದ ಬಂದ ಆದಾಯದಿಂದ ಖರೀದಿ ಮಾಡಿರುವಂತಹ ಆಸ್ತಿಗಳು ಆಗಿರುವವು ಅಂದರೆ ಸರಿಯಲ್ಲ. ಈ ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳು ಅಂತಾ ನಾನು ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿನ ಕೆಲವು ಜಮೀನುಗಳು ಭೂನ್ಯಾಯ ಮಂಡಳಿಯಿಂದ ಮಂಜೂರು ಆದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುವೆನು. ಭೂನ್ಯಾಯ ಮಂಡಳಿಯಿಯವರು ಒಟ್ಟು ಕುಟುಂಬದ

ಸದಸ್ಯರಿಗೆ ಅಂತಾ ಹೇಳಿ ಜಮೀನುಗಳನ್ನು ಮಂಜೂರು ಮಾಡಿರುವರು ಅಂದರೆ ಸರಿಯಲ್ಲ. ನಿಮ್ಮದು ರೈತಾಪಿ ಕುಟುಂಬವಾಗಿರುವುದರಿಂದ ಎತ್ತುಗಳು, ಎಮ್ಮೆಗಳು ಮತ್ತು ಚಕ್ಕಡಿಗಳು ಇರುವವು ಅಂದರೆ ಸರಿಯಲ್ಲ.

ರಿ ಸ ನಂ. 18/7 ರ ಜಮೀನು ಯಾರು, ಯಾವಾಗ ಖರೀದಿ ಹಿಡಿದಿರುವರು ಎಂದು ನನಗೆ ಗೊತ್ತಿರುವುದಿಲ್ಲ. ಆದರೆ ಖರೀದಿ ಪತ್ರದ ಆಧಾರದ ಮೇರೆಗೆ ನಿಂಗಪ್ಪ ಮತ್ತು ಆತನ ಕುಟುಂಬದ ಸದಸ್ಯರು 1941 ರಲ್ಲಿ ಖರೀದಿ ಮಾಡಿರುವರು. ಈ ಆಸ್ತಿಯನ್ನು ಯಾವ ಉತ್ಪನ್ನದಿಂದ ಅದನ್ನು ಖರೀದಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ ಅಂದರೆ ಸರಿ. ಈ ಜಮೀನನ್ನು ಸಹ ಏಕತ್ರ ಘರಾಣೆಯ ಉತ್ಪನ್ನದಿಂದ ಖರೀದಿ ಮಾಡಿರುವಂತಹ ಆಸ್ತಿ ಆಗಿರುವುದು ಅಂದರೆ ಸರಿಯಲ್ಲ. ನನ್ನ ಸಾಕ್ಷಿ ಮುಖ್ಯ ವಿಚಾರಣೆ ಪ್ರಮಾಣಪತ್ರದ ಖಂಡಿಕೆ 9 ರಲ್ಲಿ ಹೇಳಿರುವ ಸಂಗತಿಗಳು ನಿಜ ಇರುವುದಿಲ್ಲ ಅಂದರೆ ಸರಿಯಲ್ಲ.

ದಾವಾ ಆಸ್ತಿಗಳು ನಮ್ಮ ಸ್ವಂತ ಆಸ್ತಿಗಳು ಆಗಿದ್ದು, ಅವುಗಳನ್ನು ಬೇರೆ ಬೇರೆಯಾಗಿ ಸಾಗುವಳಿ ಮಾಡುತ್ತಿರುವುದಾಗಿ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. 1993 ರಲ್ಲಿ ಹಿಸ್ಸೆ ಮಾಡಿಕೊಂಡಿರುವುದಾಗಿ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ನಮ್ಮ ಗ್ರಾಮದಲ್ಲಿ ಶ್ಯಾಮಗೌಡರು ಬಂದಾಗ ನಮ್ಮ ಕುಟುಂಬದ ಹಿರಿಯರು ಚಾಕರಿ ಮಾಡುತ್ತಿದ್ದರು. ಆಗ ಈ ಜಮೀನುಗಳನ್ನು ನೀಡಿರುವರು. ಆ ಚಾಕರಿ ಮಾಡಿರುವ ಹಿರಿಯರ ಹೆಸರು ನನಗೆ ಗೊತ್ತಿರುವುದಿಲ್ಲ. 1993 ರಲ್ಲಿ ನನ್ನ ಸಹೋದರ ಮಧ್ಯೆ ಹಿಸ್ಸೆ ಆಗಿದೆ ಅಂತಾ ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ಪ್ರಕರಣ ದಾಖಲು ಮಾಡಿದ್ದೇವು ಅಂದರೆ ಸರಿ. ಆ ಪ್ರಕರಣ ದಾಖಲು ಮಾಡಿದ ನಂತರ ಇತ್ತೀಚೆಗೆ ಈ ದಾವೆ ದಾಖಲು ಮಾಡುವ ಪೂರ್ವದಲ್ಲಿ ಆಸ್ತಿಗಳಿಗೆ ಹೆಸರುಗಳನ್ನು ದಾಖಲು ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಆರಟಿಎಸ ಅಪೀಲ ನಂ. 2/2010-11 ಅಂದರೆ ಸರಿ. ಆ ಪ್ರಕರಣದಲ್ಲಿ 1992-93 ರಲ್ಲಿ ಹಿಸ್ಸೆದಿಸ್ಸೆ ಆಗಿರುವುದು ಎಂದು ಕಾಣಿಸಿರುವೆವು. ಆ

ವಾಟ್ನಿ ಮಾಡಿಕೊಂಡ ಬಗ್ಗೆ ನ್ಯಾಯಾಲಯದ ಡಿಕ್ರಿಯಾಗಲೀ ನೊಂದಾಯಿತ ವಾಟ್ನಿಪತ್ರವಾಗಲೀ ಇರುವುದಿಲ್ಲ ಆದರೆ ಊರ ಪಂಚರ ಸಮಕ್ಷಮ ವಾಟ್ನಿ ಮಾಡಿಕೊಂಡಿರುವೆವು. ನಮ್ಮ ಕುಟುಂಬದ ಸದಸ್ಯರು ಬಹಳ ಜನರು ಇರುವುದರಿಂದ ಹಾಗೂ ಹೆಣ್ಣು ಮಕ್ಕಳ ಮದ್ಯೆ ಹೊಂದಾಣಿಕೆ ಆಗದೇ ಇರುವುದರಿಂದ ಬೇರೆ ಬೇರೆ ವಾಸಿಸುತ್ತಾ ಬಂದಿರುವರು ಅಂದರೆ ಸರಿಯಲ್ಲ. ಮೊದಲಿನಿಂದಲೂ ಬೇರೆ ಬೇರೆಯಾಗಿ ವಾಸವಾಗಿರುವರು ಎಂದು ಸಾಕ್ಷಿ ಉತ್ತರಿಸುವರು. ವಾದಿಯರು ತಮ್ಮ ಹಿಸ್ಸೆಯನ್ನು ಪಾಲುವಿಭಾಗ ಮಾಡಿಕೊಡುವಂತೆ ಕೇಳಿರುವರು ಅಂದರೆ ಸರಿಯಲ್ಲ. ಆಗ ಪಾಲು ನಿರಾಕರಿಸಿರುವುದರಿಂದ ವಾದಿಯರು ಈ ದಾವೆ ದಾಖಲು ಮಾಡಿರುವರು ಅಂದರೆ ಸರಿಯಲ್ಲ. ವಾದಿಯರಿಗೆ ಹಿಸ್ಸೆ ನೀಡುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಲಿಖಿತಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯ್ತುದ್ದೇನೆ ಅಂದರೆ ಸರಿಯಲ್ಲ ದಿಃ 01.0.6.2003 ರಂದು ವಾದಿಯರು ಹಿಸ್ಸೆ ನೀಡುವಂತೆ ಕೇಳಿದಾಗ ಆಗ ನಿರಾಕರಿಸಿರುವುದರಿಂದ ಈ ದಾವೆಗೆ ವ್ಯಾಜ್ಯ ಕಾರಣ ಉಂಟಾಗಿರುವುದು ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).

ಅಸಲು ದಾವಾ ನಂ. 145/2017
ಡಿ ಡಬ್ಲು 1